**ಮಳೆಗಾಲವೆಂದರೆ ನೆನಪುಗಳ ಹೊಳೆಯೂ ಹರಿದುಬರುವ ಕಾಲ. ಗುಡುಗು ಸಿಡಿಲುಗಳೊಂದಿಗೆ ರಾತ್ರಿ ಧೋ ಎಂದು ಸುರಿಯುತ್ತಿದ್ದ ಬಿರುಮಳೆಯ ನಡುವೆ ಕರಾವಳಿ ತೀರದ ಹಳ್ಳಿಮನೆಯಲ್ಲಿ ನಡೆದ ಸಂಗತಿಯೊಂದು ಉತ್ತರ ಕನ್ನಡದ ಭಾಷೆಯಲ್ಲಿ ಅಕ್ಷರದ ರೂಪ ಪಡೆದುಕೊಂಡಿದೆ. ಮಳೆಯೊಂದಿಗೆ ಬೆಸೆದುಕೊಂಡ ಬದುಕಿನ ಸೊಗಸೂ ಈ ಬರಹದಲ್ಲಿ ಅನಾವರಣಗೊಂಡಿದೆ.**



ಮಳೆಗಾಲದಲ್ಲಿ ತುಂಬಿ ಹರಿವ ಹಳ್ಳ ತೊರೆಗಳ ದಾಟಲು ನಿರ್ಮಿಸಿದ ಕಾಲುಸಂಕ

ಬಂತೋ ಯಾರಿಗೂ ಗುತ್ತಿಲ್ಲ. ಆಷಾಢದಲ್ಲಿ ಆ ಹಳ್ಳ ತುಂಬಿ ಹರೀದಿದ್ರೆ, ಅದು ಪುರಾಣ ಕತೇಲಿ ಬರೂ ಪರಷುರಾಮ ಸೃಷ್ಟೀನೇ ಸುಳ್ಳೇನೋ ಅನ್ನೂವಂಥಾ ನಂಬ್ಕೆ ಊರರ್‍ಗೆ. ದರಾ ವರ್ಷದಂತೆ ಆ ಸಲಾನೂ ಚಳ್ಳೆಹಳ್ಳ ತುಂಬಿ ರಸ್ತೆ ಆವುದೋ ಹಳ್ಳ ಆವುದೋ ತಿಳೀದಂಥ ಸ್ಥಿತಿ.

ನಾನು ಕಿರು ಪರೀಕ್ಷೆ ಉಂಟು ಅನ್ನೋ ಗುಂಗಲ್ಲಿ ತುಸು ಅವಸರದಲ್ಲೇ ನೆಡಕೊಂಡು ಹೋಗ್ತಿದ್ದೆ. ಯಾವಾಗ್ಲೂ ಜತೆಯಾಗಿರೋ ಗೆಳ್ತಿ ಹಳ್ಳ ತುಂಬಿದ್ದು ನೋಡಿ ಪರೀಕ್ಷೆ ಮರ್ತು ಮನೇಗ್ ವಾಪಸಾದ್ಲು. ಪರೀಕ್ಷೆ ತಪ್ಪಬಾರ್ದು ಅನ್ನೂ ನನ್ನ ಉತ್ಸಾಹಕ್ಕೆ ಆ ಹಳ್ಳ ಕಡಿವಾಣ ಹಾಕಲಿಲ್ಲ. ಹಗೂರ ನೀರಿಗೆ ಇಳದಿದ್ದೆ. ಜನ ಅಲ್ಲೊಬ್ರು ಇಲ್ಲೊಬ್ರು ತಂತಮ್ಮ ದನಕರು ಹಿಡಿದೋ ತಲೇಲಿ ಮಡ್ಲಿನ ಕೊಡೆ ಹಿಡ್ದು ಹಳ್ಳ ದಾಟತಿದ್ರು. ಒಂದೊಂದು ಹೆಜ್ಜೆಗೂ ನನ್ನ ಪಾದ ಮೊಣಕಾಲು ಮಂಡೀವರೆಗೆ ಬಂದ ನೀರು ಸೊಂಟದ ತನಕ ಏರ್ತಾ ಬಂತು. ಒಳಗೆಲ್ಲೋ ಸಣ್ಣ ನಡ್ಕಾ ಆಗೋಕೆ ಶುರು ಆಯ್ತು.

ಪಾದ ಕರ್ದು ಕರ್ದು ನೀರು ಹಾಯ್ತಾ ಇತ್ತು. ಇನ್ನೇನು ಕಾಲು ತಪ್ಪಿ ಬಿದ್ದೇ ಬಿಟ್ಟೆ ಅನ್ನೂವಾಗ ಅಲ್ಲೇ ಪಕ್ಕದಲ್ಲೇ ತೇಲ್ತಾ ಇದ್ದ ಮರದ ಕೊಂಬೆ ಸಿಕ್ಕಿತ್ತು. ಆದ್ರೆ ಎಡಗೈಲಿ ಎದೆಗವ್ಚಿಕೊಂಡು ಹಿಡಕೊಂಡಿದ್ದ ಇತಿಹಾಸ ಪುಸ್ತಕ ಮತ್ತೆ ಇಂಗ್ಲೀಷ ವ್ಯಾಕರಣದ ನೋಟ್ಬುಕ್ಕು ಮತ್ತದರ ಮೇಲಿರೋ ಪೆನ್ನು ಪೆನ್ಸಿಲ್ಲು ಕೋನ ಮಾಪಕಗಳು ತುಂಬಿದ್ದ ಕಂಪಾಸು ಪೆಟ್ಗೆ ನನ್ನ ಕಣ್ಣೆದುರೇ ತೇಲಿ ತೇಲಿ ಹೋಯ್ತು. ನನಗೋ ಒಂದೇ ಸಮ ಅಳು ಉಕ್ಕುಕ್ಕಿ ಬಂತು. ಅಂದು ದಾರಿಹೋರ್‍ಯಾರೋ ನನ್ನ ಹಿಡಿದು ದಂಡೆಗೆ ತಂದು ಸರೀ ಬೈದು ವಾಪಸ್ಸು ಹಳ್ಳ ದಾಟಿಸಿ ಮನೆಗೆ ಮುಟ್ಟಿಸಿ ಹೋಗಿದ್ರು. ಮುಂದಿನ ನಾಕು ದಿನ ಜರ ಬಂದು ಮಲ್ಕೊಂಡಿದ್ದೇ ಬಂತು. ಮತ್ತೆ ಹೊಸಾ ನೋಟ್ಬುಕ್ಕು ಹೊಸಾ ಕಂಪಾಸು ತಂದ್ಕೊಟ್ಟ ಅಣ್ಣ ಈಗ್ಲೂ ದೊಡ್ಡ ಮಳೆಗಾಲದಲ್ಲಿ ಆ ಹಳ್ಳದಲ್ಲಿ ಬಳ್ಕೊಂಡು ಹೋದ ಸಂಗ್ತಿ ನೆನಪಿಸಿ ಮಕ್ಕಳಿಗೆಲ್ಲ ಹೇಳ್ತಿರ್ತಾನೆ.

ನಮ್ಮ ಮನೆಯಲ್ಲೇ ನಡೆದ ಇನ್ನೊಂದು ಭಯಾನಕ ಪ್ರಸಂಗಾನ ನಾ ನಿಮ್ಗೆ ಹೇಳ್ಳೇಬೇಕು. ಸುಮಾರು 1978–79ರ ಸಂದರ್ಭ ಇರಬಹುದೇನೋ. ಜುಲೈ ತಿಂಗಳ ರಾತ್ರಿ ಹತ್ತರ ಸಮಯ. ನಾನು ಆರೋ ಏಳೋ ತರಗತಿಯಲ್ಲಿ ಕಲೀತಿದ್ದೆ. ಕರಾವಳಿ ತೀರದ ಹಳ್ಳಿಮನೆ ಅಂದ್ಮೇಲೆ ತೆಂಗು ಕಂಗು ಬಾಳೆ ಮಾವು ಹಲಸು ಅನಾನಸು ಅಂತೆಲ್ಲ ಬೆಳೆದು ನಿಂತ ಪುಟ್ಟ ತೋಟದ ಮಧ್ಯೆ ಮೂರಂಕಣದ ಕೆಂಪು ಹೆಂಚಿನ ಮನೆ ನಮ್ದು. ಆ ರಾತ್ರಿ ಯಾವತ್ತಿನ ಹಾಗೇ ಧೋ ಧೋ ಮಳೆ ಹತ್ತಿತ್ತು.

ಬೇಲಿ ದಂಟೆಲ್ಲ ಚಿಗಿಚಿಗಿತು ಹಸಿರು ಉಕ್ಕುತಾ ಇತ್ತು. ಕಲ್ಲಿನ ಕಂಪೌಂಡನಲ್ಲೂ ಹಸಿರ ಮೆತ್ತೆ ನಳನಳಿಸ್ತಾ ಇತ್ತು. ಮಳೆ ಜತೆ ಗಾಳೀನೂ ಜೋರಾಗೆ ಬೀಸತಿತ್ತು. ಮರದ ಟೊಂಗೆ ಕಳಚಿ ದೊಪ್ಪನೆ ನೆಲಕ್ಕಪ್ಪಳಿಸಿದ ಸಪ್ಪಳಾ, ತೆಂಗಿನ ಗಿಡಗಳು ಒಂದೇ ಸಮ ರೊಂಯನೆ ಹೊಯ್ದಾಡೋ ಸದ್ದು, ಕೆರೆ ಕಟ್ಟೆ ತುಂಬಿ ಹರೀತಿತ್ತು. ಊರಿನ ಇನ್ನೊಂದು ಪಕ್ಕ ಅಂಕೋಲೆಗೆ ಸೇರಿಸೋ ಕಂತ್ರಿ ಹಳ್ಳಕ್ಕೆ ಕಟ್ಟಿದ ಮಳೆಗಾಲದ ತೂಗು ಸೇತುವೆ ಕೊಚ್ಚಿ ಹೋಗಿ, ಹೈಸ್ಕೂಲಿಗೆ ಹೋಗುವ ಅಣ್ಣನಿಗೆ ಅಂದು ಅಘೋಷಿತ ರಜೆ. ನನ್ನ ಸರಕಾರಿ ಕನ್ನಡ ಶಾಲೆಗೆ ಪಕ್ಕದ ಪಟ್ಟಣದಿಂದ ಸೈಕಲ್ಲಿನಲ್ಲಿ ಬರೂ ಮಾಸ್ರು ಅಂದಿನ ಮಳೆಯ

## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.